ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 2657/25**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 2

ದಿನಾಂಕಃ 19.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಜನಾರ್ಧನ |
| ತಂದೆಯ ಹೆಸರು | – ಲೇಟ್ ಕುಶಾಲಪ್ಪ |
| ವಯಸ್ಸು | – 69 ವರ್ಷ |
| ವೃತ್ತಿ | – ವ್ಯವಸಾಯ |
| ವಾಸಸ್ಥಳ | – ಕಟ್ಟೆಮಾಡು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1, 6 ರಿಂದ 9 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ನನ್ನ ಬಾಪ್ತು ಕೆಎ–12 ಎಂಎ–7692 ಮಾರುತಿ ಎಸ್ ಪ್ರೆಸ್ಸೋ ಕಾರು ಇದ್ದು, ಕೆಎ–12 ಎನ್–7385 ಮಾರುತಿ ಒಮಿನಿ ಕಾರು ಇರುತ್ತದೆ. ಸದರಿ ನನ್ನ ವಾಹನಗಳ ಬಾಪ್ತು 2023–24ನೇ ಸಾಲಿನ ವಿಮಾ ಪಾಲಿಸಿಯನ್ನು ಆರೋಪಿ ಬಳಿ ಮಾಡಿಸಿದ್ದೆ. ಸದರಿ ವಾಹನಗಳ ವಿಮಾ ಹಣದ ಬಾಪ್ತು ನಾನು ಆರೋಪಿಗೆ 2023 ನೇ ಇಸವಿಯಲ್ಲಿ ರೂ.4500/– ಹಾಗೂ ರೂ.6000/– ವನ್ನು ನೀಡಿರುತ್ತೇನೆ. ನನ್ನ ಬಾಪ್ತು ಕೆಎ–12 ಎಂಎ–7692 ಮಾರುತಿ ಎಸ್ ಪ್ರೆಸ್ಸೋ ಕಾರಿಗೆ ವಿಮಾ ಹಣದ ಬಾಪ್ತು ರೂ.6000/– ಆರೋಪಿಗೆ ನೀಡಿದ್ದೆ. ಆರೋಪಿ ಸದರಿ ಹಣವನ್ನು ಪಡೆದುಕೊಂಡು ಹೋದರು, ಆದರೆ ನನಗೆ ವಿಮಾ ಪಾಲಿಸಿಯನ್ನು ನೀಡಲಿಲ್ಲ. 2024 ರಲ್ಲಿ ಸದರಿ ನನ್ನ ಕೆಎ–12 ಎಂಎ–7692 ಮಾರುತಿ ಎಸ್ ಪ್ರೆಸ್ಸೋ ಕಾರು ಮರಗೋಡು ಬಳಿ ಅಪಘಾತಕ್ಕೆ ಈಡಾಗಿದ್ದು, ಆಗ ನಾನು ಆರೋಪಿಗೆ ಫೋನ್ ಮಾಡಿ ವಿಮಾ ಪಾಲಿಸಿಯ ಬಗ್ಗೆ ವಿಚಾರಿಸಿದಾಗ ಆರೋಪಿಯು ಸದರಿ ನನ್ನ ವಾಹನವನ್ನು ಕುಶಾಲನಗರದ ಮಾರುತಿ ಶೋ ರೂಂಗೆ ರಿಪೇರಿಗೆಂದು ನನ್ನ ವಾಹನವನ್ನು ಕಳುಹಿಸುವಂತೆ ಹೇಳಿದರು. ಆರೋಪಿ

ಹೇಳಿದಂತೆ ನಾನು ಕುಶಾಲನಗರದಲ್ಲಿ ನನ್ನ ಸದರಿ ವಾಹನವನ್ನು ರಿಪೇರಿ ಮಾಡಿಸಿ ನಂತರ ನ್ಯೂ ಇಂಡಿಯಾ ಇನ್ಶುರೆನ್ಸ್ ಕಚೇರಿ, ಮಡಿಕೇರಿಗೆ ಹೋಗಿ ವಿಮಾ ಹಣವನ್ನು ಕ್ಲೇಮ್ ಮಾಡಲು ಹೋದಾಗ ಅಲ್ಲಿ ಸದರಿ ಪಾಲಿಸಿಯನ್ನು ಪರಿಶೀಲಿಸಿ ಇದು ಫೇಕ್ ಪಾಲಿಸಿ ಎಂದು ಹೇಳಿರುತ್ತಾರೆ. ನಂತರ ನಾನು ಕುಶಾಲನಗರ ದ ಮಾರುತಿ ಶೋ ರೂಮ್ ಅವರಿಗೆ ರೂ.68,000/- ಪಾವತಿ ಮಾಡಿ ಸದರಿ ನನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ಫೋನ್ ಮುಖಾಂತರ ಸಂಪರ್ಕಿಸಲು ಪ್ರಯತ್ನಿಸಿದಾಗ ಆರೋಪಿ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಆಗ ನಾನು ಮತ್ತು ಚಾಸಾ-1 ರವರು ಜಂಟಿಯಾಗಿ ಆರೋಪಿಯ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇವೆ. ಅಪಘಾತ ಆಗುವ ಹಿಂದಿನ 2-3 ವರ್ಷಗಳು ಆರೋಪಿಯೇ ನಮ್ಮ ಸದರಿ ವಾಹನಕ್ಕೆ ವಿಮಾ ಪಾಲಿಸಿ ಮಾಡಿಸಿಕೊಟ್ಟಿರುತ್ತಾರೆ. ಆರೋಪಿ ನಮಗೆ ಮಾಡಿಸಿಕೊಟ್ಟಿದ್ದ ನಕಲಿ ವಿಮಾ ಪಾಲಿಸಿಯನ್ನು ನ್ಯೂ ಇಂಡಿಯಾ ಕಂಪನಿಗೆ ಹಾಜರು ಪಡಿಸಿದ್ದೇನೆ, ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.